155-330-2

(2)

## ಮಾನ್ಯ ವಿಧಾನಪರಿಷತ್ತಿನ ಸದಸ್ಯರುಗಳಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ, ಡಾ: ತಳವಾರ್ ಸಾಬಣ್ಣ, ಬಸವನಗೌಡ ಬಾದರ್ಲಿ, ಹೆಚ್.ಪಿ. ಸುಧಾಮ್ ದಾಸ, ಶ್ರೀ ಎ. ವಸಂತ್‌ಕುಮಾರ್ ಹಾಗೂ ಶ್ರೀ ಎಂ.ಎಲ್. ಅನಿಲ್‌ಕುಮಾರ್ ರವರು ನಿಯಮ-330ರಡಿ ಮಂಡಿಸಿರುವ ಗಮನಸೆಳೆಯುವ ಸೂಚನೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ

**ಪ್ರಶ್ನೆ:**

ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆಯನ್ನು ವಿಧಾನಸೌಧದ ಮುಂದೆ ಸ್ಥಾಪಿಸುವ ಬಗ್ಗೆ 25ಕ್ಕೂ ಹೆಚ್ಚು ಶಾಸಕರು ಸರ್ಕಾರವನ್ನು ಒತ್ತಾಯಿಸಿದ್ದು ಈ ಬಗ್ಗೆ ಸದನದಲ್ಲೂ ಚರ್ಚೆಯಾಗಿದ್ದರೂ, ಗೌರವಾನ್ವಿತ ಮಾನ್ಯ ಸಭಾಪತಿಯವರೂ ಸಹ ಸರ್ಕಾರಕ್ಕೆ ಪತ್ರ ಬರೆದು ಪ್ರತಿಮೆ ಸ್ಥಾಪನೆ ಬಗ್ಗೆ ಒತ್ತಾಯಿಸಿದ್ದರೂ ಸರ್ಕಾರದ ಸುತ್ತೋಲೆ ನಂ. ಕಸಂವಾಪ್ರ 564 ಕಸಧ 2012 ದಿನಾಂಕ:11.6.2012ನ್ನು ಮುಂದಿಟ್ಟು ಪರಿಶೀಲಿಸಲಾಗುವುದೆಂದು ತಿಳಿಸಿ, ತುಳಿತಕ್ಕೆ ಒಳಪಟ್ಟ ಈ ಸಮಾಜವನ್ನು, ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರಿಗೂ ಅವಮಾನಿಸುತ್ತಿರುವಂತೆ ಸಮಾಜದವರು ಸಂಶಯವನ್ನು ವ್ಯಕ್ತಪಡಿಸುತ್ತಿದ್ದು ವಿಧಾನಸೌಧದ ಮುಂದೆ ಚಾಮುಂಡೇಶ್ವರಿ ತಾಯಿಯ ಪ್ರತಿಮೆ ಸ್ಥಾಪನೆ ಮಾಡಿರುವ ರೀತಿಯಲ್ಲೇ ಸಮರೋಪಾದಿಯಲ್ಲಿ ತಾರತಮ್ಯ ನೀತಿಯನ್ನು ಅನುಸರಿಸದೆ ಈ ಕೂಡಲೇ ವಿಧಾನಸೌಧದ ಮುಂದೆ ವಿಶ್ವಗುರು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಪ್ರತಿಮೆ ಸ್ಥಾಪಿಸಲು ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಹನ್ನೆರಡನೇ ಶತಮಾನದ ಸಾಮಾಜಿಕ ಕ್ರಾಂತಿಯ ಹರಿಕಾರರಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರು ಒಬ್ಬರು. ಭಿನ್ನ ಹಾಗೂ ವಿಶಿಷ್ಟ ವ್ಯಕ್ತಿತ್ವದ ಅಂಬಿಗರ ಚೌಡಯ್ಯನವರು ನೇರ ನಿರ್ಭೀತ ನುಡಿಗಳಿಗೆ ಪ್ರಸಿದ್ಧರು. ಅಂಬಿಗರ ಚೌಡಯ್ಯ ಎಂಬ ಅಂಕಿತನಾಮದಿಂದಲೇ ವಚನಗಳನ್ನು ರಚಿಸಿರುತ್ತಾರೆ.

ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾಗಿ, 50 ವರ್ಷ ತುಂಬಿದ ಸವಿನೆನಪಿಗಾಗಿ ಕರ್ನಾಟಕ ಸಂಭ್ರಮ-50ರ ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ ಅಭಿಯಾನದಡಿ ವರ್ಷಪೂರ್ತಿ ಕಾರ್ಯಕ್ರಮವನ್ನು ಆಚರಿಸಲಾಗಿದ್ದು, ಅದರ ಭಾಗವಾಗಿ ನಾಡದೇವಿ ಭುವನೇಶ್ವರಿ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲಾಗಿದೆ.

12ನೇ ಶತಮಾನದಲ್ಲಿ ಸಮಾಜ ಸುಧಾರಣೆಗಾಗಿ ತಮ್ಮ ಇಡೀ ಜೀವನವನ್ನೇ ಮುಡುಪಾಗಿಟ್ಟು ಸೇವೆ ಸಲ್ಲಿಸಿದ ಬಸವಾದಿ ಶಿವಶರಣರು ಮತ್ತು ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರನ್ನು ಒಳಗೊಂಡಂತೆ 160 ಕ್ಕಿಂತ ಹೆಚ್ಚು ಶಿವಶರಣರು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸುಧಾರಣೆಗೆ ಶ್ರಮಿಸಿರುತ್ತಾರೆ. ಶಿವಶರಣರ ವಿವರಗಳನ್ನು ಅನುಬಂಧದಲ್ಲಿರಿಸಿದೆ.

ಸದರಿ ಮನವಿಯಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಸುತ್ತೋಲೆ ಸಂಖ್ಯೆ: ಕಸಂವಾಪ್ರ 564 ಕಸಧ 2012, ದಿನಾಂಕ:11.06.2012ರಲ್ಲಿ ಸರ್ಕಾರದ / ಸಾರ್ವಜನಿಕ ಜಾಗದಲ್ಲಿ ಯಾವುದೇ ಸಂತರ / ಶರಣರ, ಜನ ನಾಯಕರ, ಸ್ವಾತಂತ್ರ್ಯ ಹೋರಾಟಗಾರರ ಅಥವಾ ಗಣ್ಯ ವ್ಯಕ್ತಿಗಳ ಪ್ರತಿಮೆಯನ್ನು ಸ್ಥಾಪಿಸುವುದನ್ನು ನಿರ್ಬಂಧಿಸಿದೆ.

ಮುಂದುವರೆದು, ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ದಾಖಲಾದ SLP (C) ಸಂಖ್ಯೆ 8519/2006ರ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:18.01.2013ರಂದು ನೀಡಿರುವ ತೀರ್ಪಿನಲ್ಲಿರುವ ಒಂದು ಅಂಶವು ಈ ಕೆಳಕಂಡಂತೆ ಇರುತ್ತದೆ.

> ".........State Government shall not grant any permission for installation of any statue or construction of any structure in public roads, pavements, sideways and other public utility places............"

ಸುಮಾರು 160 ಕ್ಕಿಂತ ಹೆಚ್ಚು ಶಿವಶರಣರು ಜನಸಾಮಾನ್ಯರ ಭಾಷೆಯಲ್ಲಿ ವಚನಗಳನ್ನು ರಚಿಸುವ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸುಧಾರಣೆಗೆ ಶ್ರಮಿಸಿರುತ್ತಾರೆ. ಹಲವಾರು ಶಿವಶರಣರ ಪ್ರತಿಮೆಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ಬೇಡಿಕೆ ಇರುತ್ತದೆ. ಆದರೆ 160 ಕ್ಕಿಂತ ಹೆಚ್ಚು ಶಿವಶರಣರ ಪ್ರತಿಮೆಯನ್ನು ಸ್ಥಾಪಿಸುವುದು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಈ ಮಹಾನ್ ಚೇತನಗಳ ಶಿವಶರಣರ ಹೆಸರುಗಳನ್ನು ಒಂದೇ ಶಿಲೆಯಲ್ಲಿ ಕೆತ್ತಿಸಿ ಶಿಲಾಶಾಸನ ಮಾದರಿಯಲ್ಲಿ ಸ್ಥಾಪಿಸುವ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ವತಿಯಿಂದ ಪರಿಶೀಲಿಸುವಂತೆ ತಿಳಿಸಲಾಗುತ್ತಿದೆ.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

# ಅನುಬಂಧ

| ಕ್ರ ಸಂ | ವಚನಕಾರರ ಹೆಸರು | ಕ್ರ. ಸಂ | ವಚನಕಾರರ ಹೆಸರು |
|---|---|---|---|
| 1. | ಬಸವಣ್ಣ | 26. | ಉರಿಲಿಂಗದೇವ |
| 2. | ಅಲ್ಲಮಪ್ರಭು | 27. | ಉರಿಲಿಂಗ ಪೆದ್ದಿ |
| 3. | ಅಕ್ಕಮಹಾದೇವಿ | 28. | ಉಳಿಯುಮೇಶ್ವರ ಚಿಕ್ಕಯ್ಯ |
| 4. | ಚೆನ್ನಬಸವೇಶ್ವರ | 29. | ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ |
| 5. | ಸಿದ್ಧರಾಮೇಶ್ವರ | 30. | ಎಲೆಗಾರ ಕಾಮಣ್ಣ |
| 6. | ಅಂಗ ಸೋಂಕಿನ ಲಿಂಗ ತಂದೆ | 31. | ಏಕಾಂತದ ರಾಮಯ್ಯ |
| 7. | ಅಂಬಿರಗ ಚೌಡಯ್ಯ | 32. | ಏಲೇಶ್ವರದ ಕೇತಯ್ಯ |
| 8. | ಅಕ್ಕ ನಾಗಮ್ಮ | 33. | ಕಂಕರಿ ಕಕ್ಕಯ್ಯ |
| 9. | ಅಕ್ಕಮ್ಮ | 34. | ಕಂಬದ ಮಾರಿತಂದೆ |
| 10. | ಅಗ್ಘವಣಿ ಹಂಪಯ್ಯ | 35. | ಕದಿರ ಕಾಯಕದ ಕಾಳವ್ವೆ |
| 11. | ಅಗ್ಘವಣಿ ಹೊನ್ನಯ್ಯ | 36. | ಕದಿರ ರೆಮ್ಮವ್ವೆ |
| 12. | ಅಜಗಣ್ಣ- ಮುಕ್ತಾಯಕ್ಕ | 37. | ಕನ್ನಡಿ ಕಾಯಕದ ಅಮ್ಮಿದೇವಯ್ಯ |
| 13. | ಅನಾಮಿಕ ನಾಚಯ್ಯ | 38. | ಕನ್ನಡ ಕಾಯಕದ ರೇಮಮ್ಮ |
| 14. | ಅಪ್ಪಿದೇವಯ್ಯ | 39. | ಕನ್ನದ ಮಾರಿತಂದೆ |
| 15. | ಅಮರಗುಂಡದ ಮಲ್ಲಿಕಾರ್ಜುನ ತಂದೆ | 40. | ಕರುಳಕೇತಯ್ಯ |
| 16. | ಅಮುಗಿ ದೇವಯ್ಯ | 41. | ಕಲಕೇತ ಬ್ರಹ್ಮಯ್ಯ |
| 17. | ಅಮುಗಿ ರಾಯಮ್ಮ | 42. | ಕಾಮಾಟದ ಭೀಮಣ್ಣ |
| 18. | ಅರಿವಿನ ಮಾರಿತಂದೆ | 43. | ಕಾಲಕಣ್ಣಿಯ ಕಾಮಮ್ಮ |
| 19. | ಅವಸರದ ರೇಕಣ್ಣ | 44. | ಕಾಳವ್ವೆ (ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ) |
| 20. | ಆದಯ್ಯ | 45. | ಕಾಳವ್ವೆ (ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ) |
| 21. | ಆನಂದಯ್ಯ | 46. | ಕಾಳವ್ವೆ (ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ) |
| 22. | ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ | 47. | ಕಿನ್ನರಿ ಬ್ರಹ್ಮಯ್ಯ |
| 23. | ಇಳೆಹಾಳ ಬೊಮ್ಮಯ್ಯ | 48. | ಕೀಲಾರದ ಭೀಮಣ್ಣ |
| 24. | ಉಗ್ಘಡಿಸುವ ಗಬ್ಬಿದೇವಯ್ಯ | 49. | ಕೂಗಿನ ಮಾರಿತಂದೆ |
| 25. | ಉಪ್ಪರ ಗುಡಿಯ ಸೋಯಿದೇವಯ್ಯ | 50. | ಕೇತಲದೇವಿ (ಗುಂಡಯ್ಯಗಳ ಪುಣ್ಯಸ್ತ್ರೀ) |

| ಕ್ರ ಸಂ | ವಚನಕಾರರ ಹೆಸರು | ಕ್ರ. ಸಂ | ವಚನಕಾರರ ಹೆಸರು |
|---|---|---|---|
| 51. | ಕೆಂಭಾವಿ ಭೋಗಣ್ಣ | 76. | ತೆಲುಗೇಶ ಮಸಣಯ್ಯ |
| 52. | ಕೊಟಾರದ ಸೋಮಣ್ಣ | 77. | ದಶಗಣ ಸಿಂಗಿದೇವಯ್ಯ |
| 53. | ಕೊಟ್ಟಣದ ಸೋಮಮ್ಮ | 78. | ದಸರಯ್ಯ |
| 54. | ಕೋಲ ಶಾಂತಯ್ಯ | 79. | ದಾಸೋಹದ ಸಂಗಣ್ಣ |
| 55. | ಗಂಗಮ್ಮ (ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ) | 80. | ದುಗ್ಗಳೆ |
| 56. | ಗಂಗಾಂಬಿಕೆ-ನೀಲಾಂಬಿಕೆ | 81. | ನಗೆಯ ಮಾರಿತಂದೆ |
| 57. | ಗಜೇಶ ಮಸಣಯ್ಯ | 82. | ನಿಜಗುಣಯೋಗಿ |
| 58. | ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ | 83. | ನಿಜಲಿಂಗ ಚಿಕ್ಕಯ್ಯ |
| 59. | ಗಾಣದ ಕಣ್ಣಪ್ಪ | 84. | ನಿವೃತ್ತಿ ಸಂಗಯ್ಯ ವಚನಾಂಕಿತದ ಸೊಪ್ಪೆಯ ಬಸವಣ್ಣ |
| 60. | ಗಾವುದಿ ಮಾಚಯ್ಯ | 85. | ನುಲಿಯ ಚಂದಯ್ಯ |
| 61. | ಗುಡ್ಡವ್ವ (ಬತ್ತಲೇಶ್ವರನ ಪುಣ್ಯಸ್ತ್ರೀ) | 86. | ನೆಲುವಿಗೆಯ ಶಾಂತಯ್ಯ |
| 62. | ಗುರುಪುರದ ಮಲ್ಲಯ್ಯ | 87. | ಪುರದ ನಾಗಣ್ಣ |
| 63. | ಗುರುಬಸವೇಶ್ವರ | 88. | ಪ್ರಸಾದಿ ಭೋಗಣ್ಣ |
| 64. | ಗುರುಭಕ್ತಯ್ಯ | 89. | ಪ್ರಸಾದಿ ಲೆಂಕಬಂಕಣ್ಣ |
| 65. | ಗೊಗ್ಗವ್ವ | 90. | ಬಹುರೂಪಿ ಚೌಡಯ್ಯ |
| 66. | ಗೋರಕ್ಷ | 91. | ಬಳ್ಳೇಶ ಮಲ್ಲಯ್ಯ |
| 67. | ಘಟ್ಟಿವಾಳಯ್ಯ | 92. | ಬಾಚಿಕಾಯಕದ ಬಸವಣ್ಣ |
| 68. | ಚಂದಿಮರಸ | 93. | ಬಾಲ ಬೊಮ್ಮಣ್ಣ |
| 69. | ಜಗಳಗಂಟ ಕಾಮಣ್ಣ | 94. | ಬಾಲ ಸಂಗಣ್ಣ |
| 70. | ಜೇಡರ ದಾಸಿಮಯ್ಯ | 95. | ಬಾಹೂರ ಬೊಮ್ಮಣ್ಣ |
| 71. | ಜೋದರ ಮಾಯಣ್ಣ | 96. | ಬಿಬ್ಬಿ ಬಾಚಯ್ಯ |
| 72. | ಡೋಹರ ಕಕ್ಕಯ್ಯ | 97. | ಬೊಂತಾದೇವಿ |
| 73. | ಢಕ್ಕೆಯ ಮಾರಯ್ಯ | 98. | ಬೊಕ್ಕಸದ ಚಿಕ್ಕಣ್ಣ |
| 74. | ತಳವಾರ ಕಾಮಿದೇವಯ್ಯ | 99. | ಭರಿತಾರ್ಪಣದ ಚೆನ್ನಬಸವಣ್ಣ |
| 75. | ತುರುಗಾಹಿ ರಾಮಣ್ಣ | 100. | ಭಿಕಾರಿ ಭೀಮಯ್ಯ |

| ಕ್ರ ಸಂ | ವಚನಕಾರರ ಹೆಸರು | ಕ್ರ. ಸಂ | ವಚನಕಾರರ ಹೆಸರು |
|---|---|---|---|
| 101. | ಭೋಗಣ್ಣ | 126. | ಲಕ್ಕಮ್ಮ (ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ) |
| 102. | ಮಡಿವಾಳ ಮಾಚಿದೇವ | 127. | ಲಕ್ಷ್ಮೀದೇವಿ |
| 103. | ಮಡಿವಾಳಯ್ಯಗಳ ಸಮಯಾಚಾರದ ಮಲ್ಲಿಕಾರ್ಜುನದೇವ | 128. | ಲದ್ದೆಯ ಸೋಮಣ್ಣ |
| 104. | ಮನಸಂದ ಮಾರಿತಂದೆ | 129. | ವಚನಭಂಡಾರಿ ಶಾಂತರಸ |
| 105. | ಮನುಮುನಿ ಗುಮ್ಮಟದೇವ | 130. | ವರದ ಸಂಕಣ್ಣ |
| 106. | ಮರುಳಸಿದ್ಧ - ಮಲ್ಲಿಕಾರ್ಜುನ ಪಂಡಿತಾರಾಧ್ಯ ಅಮರಗೊಂಡದ ಮಲ್ಲಿಕಾರ್ಜುನ ತಂದೆ | 131. | ವರದಾನಿ ಗುಡ್ಡವ್ವೆ |
| 107. | ಮಲಹರ ಕಾಯಕದ ಚಿಕ್ಕದೇವಯ್ಯ | 132. | ವೀರಗೊಲ್ಲಾಳ |
| 108. | ಮರುಳು ಶಂಕರದೇವ | 133. | ವೀರಮ್ಮ (ದಸರಯ್ಯಗಳ ಪುಣ್ಯಸ್ತ್ರೀ) |
| 109. | ಮಲ್ಲಿಕಾರ್ಜುನ ಪಂಡಿತಾರಾಧಯ್ಯ | 134. | ವೇದಮೂರ್ತಿ ಸಂಗಮ್ಮ |
| 110. | ಮಸಣಮ್ಮ (ಎಡೆಮರದ ನಾಗಿದೇವಯ್ಯಗಳ ಪುಣ್ಯಸ್ತ್ರೀ) | 135. | ವೈದ್ಯ ಸಂಗಣ್ಣ |
| 111. | ಮಾದಾರ ಚೆನ್ನಯ್ಯ | 136. | ಶಂಕರದಾಸಿಮಯ್ಯ |
| 112. | ಮಾದಾರ ಧೂಳಯ್ಯ | 137. | ಶಿವನಾಗಮಯ್ಯ |
| 113. | ಮಾರುಡಿಗೆಯ ನಾಚಯ್ಯ | 138. | ಶಿವಲೆಂಕ ಮಂಚಣ್ಣ |
| 114. | ಮುಗ್ದ ಸಂಗಯ್ಯ | 139. | ಸಂಗಮೇಶ್ವರ ಅಪ್ಪಣ್ಣ |
| 115. | ಮುಸುಟೆಯ ಚೌಡಯ್ಯ | 140. | ಸಕಲೇಶ ಮಾದರಸ |
| 116. | ಮುಳುಭಾವಿ ಸೋಮಣ್ಣ | 141. | ಸಗರದ ಬೊಮ್ಮಣ್ಣ |
| 117. | ಮೆರೆಮಿಂಡಯ್ಯ | 142. | ಸತ್ತಿಗೆ ಕಾಯಕದ ಮಾರಯ್ಯ |
| 118. | ಮೇದಾರ ಕೇತಯ್ಯ | 143. | ಸತ್ಯಕ್ಕ |
| 119. | ಮೋಳಿಗೆ ಮಾರಯ್ಯ | 144. | ಸಿದ್ಧಾಂತಿ ವೀರಸಂಗಯ್ಯ |
| 120. | ಮೈದುನ ರಾಮಯ್ಯ | 145. | ಸುಂಕದ ಬಂಕಣ್ಣ |
| 121. | ರಕ್ಕಸ ಬೊಮ್ಮಿತಂದೆ | 146. | ಸುಗ್ಗಲೆ |
| 122. | ರಾಯಸದ ಮಂಚಣ್ಣ - ರಾಯಮ್ಮ | 147. | ಸುರಗಿಯ ಚೌಡಯ್ಯ |
| 123. | ರೇಕಮ್ಮ (ರೇವಣ್ಣಸಿದ್ಧಯ್ಯಗಳ ಪುಣ್ಯಸ್ತ್ರೀ) | 148. | ಸೂಜಿ ಕಾಯಕದ ರಾಮಿತಂದೆ |
| 124. | ರೇಚವ್ವೆ (ಕಾಟಕೂಟಯ್ಯಗಳ ಪುಣ್ಯಸ್ತ್ರೀ) | 149. | ಸೂಳೆ ಸಂಕವ್ವೆ |
| 125. | ರೇವಣ್ಣಸಿದ್ಧ-ಘನಲಿಂಗಿ ರುದ್ರಮುನಿ | 150. | ಸೊಡ್ಡಳ ಬಾಚರಸ |

| | |
|---|---|
| 151. | ಹಡಪದ ಅಪ್ಪಣ್ಣ |
| 152. | ಲಿಂಗಮ್ಮ |
| 153. | ಹಡಪದ ರೇಚಣ್ಣ |
| 154. | ಹರಳಯ್ಯ |
| 155. | ಮಧುವಯ್ಯ |
| 156. | ಹಾವಿನಹಾಳ ಕಲ್ಲಯ್ಯ |
| 157. | ಹುಂಜಿನ ಕಾಳಗದ ದಾಸಯ್ಯ |
| 158. | ಹೂಗಾರ ಮಾದಣ್ಣ |
| 159. | ಹೆಂಡದ ಮಾರಯ್ಯ |
| 160. | ಹೊಡೆಹುಲ್ಲ ಬಂಕಣ್ಣ |

ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
ಬೆಂಗಳೂರು.